ಪರಿಚಯ ಮಾಡಿಸಿ ಕೊಟ್ಟು, ನನ್ನನ್ನು ಆಯ್ಕೆ ಮಾಡಿ ಕಳುಹಿಸುವ ಪ್ರಯತ್ನದಲ್ಲಿ ಅವರ ಪಾತ್ರ ಬಹಳ ಮುಖ್ಯವಾದದ್ದು ಎಂದು ಹೇಳುತ್ತೇನೆ. ಅದು ಅಲ್ಲದೇ ಕರ್ನಾಟಕ ರಾಜ್ಯದಒಬ್ಬ ಚಾಣಾಕ್ಷ ರಾಜಕಾರಣಿ ಹಾಗೂ ಛಲಗಾರರೆಂದು ಹೇಳಬೇಕಾಗುತ್ತದೆ. ಇವತ್ತು ರಾಜ್ಯ ಒಬ್ಬ ಹಿಂದುಳಿದ ನಾಯಕರನ್ನು ಕಳೆದುಕೊಂಡಿರುವಂಥ ದು:ಖದಲ್ಲಿ, ಅದರಲ್ಲೂ ವಿಶೇಷವಾಗಿ ಬೆಳಗಾಂ ಜಿಲ್ಲೆಯಲ್ಲಿ ಅತೀ ಹೆಸರು ಆಗಿರುವಂಥ ವಿ.ಎಲ್.ಪಾಟೀಲ್‌ರವರನ್ನು ಬ್ಯಾಕೂಡ್ ಹುಲಿ, ರಾಯಬಾಗ್ ಹುಲಿ ಎಂದು ಅಲ್ಲದೇ, ಈ ಭಾಗದಲ್ಲಿ ವಿ.ಎಲ್.ಪಾಟೀಲ್‌ರವರಂತೆ ಯಾರೂ ಹೆಸರು ತೆಗೆದುಕೊಂಡಂಥ ಉದಾಹರಣೆಗಳು ಇಲ್ಲ. ಬೆಳಗಾಂ ಜಿಲ್ಲೆಯಲ್ಲಿ ಅಣ್ಣನವರೆಂದರೆ ವಿ.ಎಲ್.ಪಾಟೀಲ್ ಒಬ್ಬರೇ ಆಗಿದ್ದರು. ಈ ಭಾಗದಲ್ಲಿ ಆ ರೀತಿಯ ಛಾಪನ್ನು ಮೂಡಿಸಿದಂಥ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನೆಲ್ಲಾ ಅಗಲಿದ್ದಾರೆ, ಅವರಿಗೆ ವಿಶೇಷವಾಗಿ ಶ್ರದ್ಧಾಂಜಲಿಯನ್ನು ಆರ್ಪಿಸುವುದರ ಜೊತೆಗೆ, ಅವರ ಕುಟುಂಬವರ್ಗದವರಿಗೆ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಹೇಳುತ್ತಾ, ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ದಿವಂಗತರಾದ ವಿ.ಎಲ್.ಪಾಟೀಲ್‌ರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು:- ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರು:- ಈಗ ಪ್ರಶ್ನೋತ್ತರ

2. ಕಾವೇರಿ ನೀರನ್ನು ಬಿಟ್ಟಿರುವುದು ಮತ್ತು ಕೆಹೆಚ್‌ಟಿ ಕರ್ಮಕಾಂಡದ ಬಗ್ಗೆ

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೆ, ...

(ಈ ಹಂತದಲ್ಲಿ ಶ್ರೀ ಹೆಚ್.ಪಿ.ಮಂಜುನಾಥ್(ಹುಣಸೂರು)ರವರು "ಕೆ.ಹೆಚ್.ಬಿ.ಕರ್ಮಕಾಂಡ" ಎಂಬ ಬರಹದ ಫಲಕವನ್ನು ಹಿಡಿದು ಇದರ ತನಿಖೆಯಾಗಲಿ ಎಂದು ಹೇಳುತ್ತಾ ಸದನದ ಬಾವಿಗೆ ಬಂದರು)

ಅಧ್ಯಕ್ಷರು:-ತಾವು ಅನುಮತಿಯನ್ನು ಪಡೆಯದೇ ಈ ರೀತಿ ಮಾಡಿದರೆ ಹೇಗೆ? ಈ ರೀತಿ flex ಅನ್ನು ತರಲು ಅನುಮತಿ ಯಾರು ಕೊಟ್ಟರು? ಇದು ಸರಿಯಾದ ವರ್ತನೆ ಅಲ್ಲ.ತಾವು ಇದನ್ನು ಬೇರೆ ರೂಪದಲ್ಲಿ ತನ್ನಿ, ಆ flex ಅನ್ನು ತೆಗೆಯಿರಿ.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್)ಸದಸ್ಯರು ಸದನದ ಬಾವಿಗೆ ಬಂದು ಧರಣಿಯನ್ನು ಪ್ರಾರಂಭಿಸಿದರು)

ಶ್ರೀ ಸಿದ್ಧರಾಮಯ್ಯ (ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, we are in Dharana ಸರ್ಕಾರಕ್ಕೆ ಕಣ್ಣೂ ಇಲ್ಲ, ಕಿವಿಯೂ ಇಲ್ಲ. ಈ ರಾಜ್ಯದ ಜನರ ಬಗ್ಗೆ ಅವರಿಗೆ ಕಾಳಜಿ ಇಲ್ಲ. ಕಾವೇರಿ ನೀರನ್ನೆಲ್ಲಾ ಬಿಟ್ಟು ಬಿಟ್ಟರು. ಈಗಾಗಲೇ ೪೩,೦೦೦ ಕ್ಯೂಸೆಕ್ಸ್ ನೀರನ್ನು ಬಿಟ್ಟು ಬಿಟ್ಟಿದ್ದಾರೆ. ಮಾನ್ಯ ಮಂಜುನಾಥ್‌ರವರಿಗೆ ಕೆ.ಹೆಚ್.ಬಿ. ಸಮಸ್ಯೆ ಇದೆ.

ಅಧ್ಯಕ್ಷರು:- Flex ಬೇಡ, ಅದನ್ನು ತೆಗೆಯಲಿ.

ಶ್ರೀ ಸಿದ್ಧರಾಮಯ್ಯ:- ಕೆ.ಹೆಚ್.ಬಿ.ಅಧ್ಯಕ್ಷರು ಮಾಡಬಾರದ್ದನ್ನು ಏನೋ ಅಲ್ಲಿ ಮಾಡಿದ್ದಾರಂತೆ, ಅದಕ್ಕೋಸ್ಕರ ಸದಸ್ಯರು flex ಅನ್ನು ಹಿಡಿದುಕೊಂಡು ಬಂದಿದ್ದಾರೆ.

ಅಧ್ಯಕ್ಷರು:- ಆ ವಿಷಯವನ್ನು ಬೇರೆ ರೂಪದಲ್ಲಿ ತರಲಿ, ಅವಕಾಶ ಕೊಡೋಣ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೆ, Ruling Party ಯವರೆ ಹಿಡಿದುಕೊಂಡು ಬಂದಿದ್ದರು, ನೀವೇ allow ಮಾಡಿದ್ದೀರಿ. ಸರ್ಕಾರ ನಡೆಸುವವರೇ ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆಯೆಂದು ಬನಿಯನ್‌ಗಳನ್ನು

ಏನೇನೋ ಹಾಕಿಕೊಂಡು ಬಂದಿದ್ದರು.ಆದರೆ, ಇವರನ್ನು ಬೇಡವೆಂದು ಹೇಳುತ್ತೀರಾ?

ಅಧ್ಯಕ್ಷರು:- Flex ಅನ್ನು ತೆಗೆಸಿ.

ಶ್ರೀ ಸಿದ್ಧರಾಮಯ್ಯ:- ಸ್ವಲ್ಪ ಹೊತ್ತು ಪ್ರದರ್ಶನ ಮಾಡಲಿ ಬಿಡಿ.

(ಈ ಹಂತದಲ್ಲಿ ಮಾನ್ಯ ಹೆಚ್.ಪಿ.ಮಂಜುನಾಥ್‌ರವರು ಸದನದ ಬಾವಿಯಲ್ಲಿ ಫಲಕವನ್ನು ಹಿಡಿದು ನಿಂತಿದ್ದರು)

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾವು ಇದರ ಬಗ್ಗೆ Calling Attention ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿದ್ದಾರೆ. ಈ ಕೂಡಲೇ ನೀರನ್ನು ನಿಲ್ಲಿಸುತ್ತೇವೆಂದು ಹೇಳಬೇಕು. ಮೊನ್ನೆ ನೀರು ನಿಲ್ಲಿಸುತ್ತೇವೆ, ಬಿಡುವುದಿಲ್ಲವೆಂದು ಹೇಳಿ, ರಾತ್ರೋರಾತ್ರಿ ೪೩,೦೦೦ ಕ್ಯೂಸೆಕ್ಸ್ ನೀರನ್ನು ಹರಿದು ಬಿಟ್ಟಿದ್ದಾರೆ. ಬೆಳಿಗ್ಗೆ ೪೩,೦೦೦ ಕ್ಯೂಸೆಕ್ಸ್ ಆಗಿತ್ತು, ಈಗ ೫೦,೦೦೦ ಕ್ಯೂಸೆಕ್ಸ್ ಆಗಿರಬಹುದು. ಇದು ಈ ರಾಜ್ಯದ ಜನರಿಗೆ ಮಾಡಿರುವಂಥ ದ್ರೋಹ, ಈ ಸದನಕ್ಕೆ ಮಾಡಿರುವಂಥ ಅವಮಾನ, ಅಗೌರವ. ನಮಗೆ ಇಲ್ಲಿ ನೀರು ಬಿಡುವುದಿಲ್ಲವೆಂದು statement ಮಾಡಿ, ಈ statement ನಲ್ಲಿ ಏನೂ ಹೇಳದೇ, ನಮ್ಮನ್ನೆಲ್ಲಾ ಕತ್ತಲೆಯಲ್ಲಿಟ್ಟು, ಸದನವನ್ನು ಕತ್ತಲೆಯಲ್ಲಿಟ್ಟು, ಇಲ್ಲಿ ಸದನ ನಡೆಯುತ್ತಿರುವಾಗ ನೀರು ಬಿಡುತ್ತೇವೆ, ಬಿಡುವುದಿಲ್ಲ ಎಂದು ಯಾವುದನ್ನು ಹೇಳದೇ, ನೀರನ್ನು ಬಿಟ್ಟಿದ್ದಾರೆ. ಇವತ್ತು ಆ ಭಾಗದ ಜನರ ಗತಿ ಏನಾಗಿದೆಯೆಂಬುದು ನಿಮಗೆ ಗೊತ್ತಿದೆಯೇ? ಬೆಳೆಗಳೆಲ್ಲಾ ಒಣಗಿ ಹೋಗುತ್ತದೆ, ಕುಡಿಯುವುದಕ್ಕೆ ನೀರು ಸಿಗುವುದಿಲ್ಲ, ದನ-ಕರುಗಳಿಗೆ ಮೇವಿಲ್ಲ. ಇವರು ನೀರನ್ನು ಎಷ್ಟು ಬಿಡಬೇಕೋ ಅದಕ್ಕಿಂತ ಜಾಸ್ತಿ ನೀರನ್ನು ಬಿಡುವುದಕ್ಕೆ ಪ್ರಾರಂಭ ಮಾಡಿ ಬಿಟ್ಟಿದ್ದಾರೆ. ಇವರು ಸಿ.ಎಂ.ಸಿ.ಮುಂದೆ ಹೋದರು, ಇಲ್ಲಿ ಹಿಂದೆ ಸಿ.ಎಂ.ಸಿ.ಕೊಟ್ಟಿದ್ದಕ್ಕಿಂತ ಹೆಚ್ಚಿಗೆ ೧೨ ಟಿ.ಎಂ.ಸಿ.ನೀರು ಬಿಡಬೇಕೆಂದು

ಹೇಳಿದ್ದಾರೆ, ೭ ಟಿ.ಎಂ.ಸಿ.ನೀರನ್ನು ಬಿಡಬೇಕೆನ್ನುವ ಕಡೆ ೧೨ ಟಿ.ಎಂ.ಸಿ.ನೀರನ್ನು ಬಿಡಬೇಕೆಂದು ಹೇಳಿದ್ದಾರೆ. ನೀರು ಎಲ್ಲಿದೆ? ನಾವು ಯಾವ ಕಾರಣಕ್ಕೂ ನೀರು ಬಿಡುವುದಿಲ್ಲ. ಸರ್ಕಾರ ಈ ಬಗ್ಗೆ ಸ್ಪಷ್ಟನೆ ಮಾಡಬೇಕು.

(ಕಾಂಗ್ರೆಸ್ ಹಾಗೂ ಜೆ.ಡಿ.(ಎಸ್)ನ ಬಹುತೇಕ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿದ್ದರು)

ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ, ತಮ್ಮ ಗೃಹ ಕಛೇರಿ ಕೃಷ್ಣಾದಲ್ಲಿ ಪೊರಗಡೆ ಸರ್ಕಾರ ಹೋದರೂ ಪರವಾಗಿಲ್ಲ, ಕುರ್ಚಿ ಹೋದರೂ ಪರವಾಗಿಲ್ಲ, ಒಂದು ಹನಿ ನೀರನ್ನು ಬಿಡುವುದಿಲ್ಲ ಎಂದು ಹೇಳಿದ್ದರು. ನಿಮ್ಮ ಆ ವೀರಾವೇಶದ ಮಾತುಗಳು ಈಗ ಎಲ್ಲಿ ಹೋಯಿತು ಸ್ವಾಮಿ? ಏನಾದವು ಆ ವೀರಾವೇಶದ ಮಾತುಗಳು? ನೀರು ಬಿಟ್ಟು ನೀವು ಕರ್ನಾಟಕ ರಾಜ್ಯಕ್ಕೆ ದ್ರೋಹ ಮಾಡಿಲ್ಲವೇ? ಇವತ್ತು ನಾವು ಅನೇಕ ವಿಚಾರ-ಗಳನ್ನು ಚರ್ಚೆ ಮಾಡಬೇಕೆಂದಿದ್ದೆವು. ಮೊದಲನೇ ಬಾರಿಗೆ ಸುವರ್ಣ ಸೌಧದಲ್ಲಿ ಅಸೆಂಬ್ಲಿ ನಡೆಯುತ್ತಿದೆ, ಈ ಸಂದರ್ಭದಲ್ಲಿ ನಾವು ಉತ್ತರ ಕರ್ನಾಟಕದ ಅನೇಕ ಸಮಸ್ಯೆಗಳ ಬಗ್ಗೆ Upper Krishna ಬಗ್ಗೆ, ನಂಜುಂಡಪ್ಪನವರ ವರದಿಯ ಬಗ್ಗೆ, ೩೭೧ರ ಬಗ್ಗೆ, ಹೀಗೆ ಅನೇಕ major issues ಚರ್ಚೆಗೆ ಇದ್ದವು. ರೈತರಿಗೆ ನೀಡಬೇಕಾದ ಕಬ್ಬಿನ ಬೆಂಬಲ ಬೆಲೆ,ಹೀಗೆ ಇನ್ನೂ ಅನೇಕ ವಿಚಾರಗಳ ಬಗ್ಗೆ ನಾವು ಮಾತನಾಡಬೇಕೆಂದಿದ್ದೆವು. ಆದರೆ ಇವತ್ತು ನೀರು ಬಿಟ್ಟು, ಇಲ್ಲಿ ನಾವು ಧರಣಿ ಮಾಡುವಂಥ ಅನಿವಾರ್ಯ ಪರಿಸ್ಥಿತಿಯನ್ನು ಈ ಸರ್ಕಾರದವರು ನಿರ್ಮಾಣ ಮಾಡಿದ್ದಾರೆ. ಎರಡನೆಯದಾಗಿ, ಈ ಸರ್ಕಾರ ಬಹುಮತ ಕಳೆದುಕೊಂಡು ಬಿಟ್ಟಿದೆ. It is a minority Government. ಮಾನ್ಯ ಜಗದೀಶ್ ಶೆಟ್ಟರ್‌ರವರೇ, if you really believe in

parliamentary system of democracy, I suggest, immediately you please resign. Don't establish a wrong precedent. Constitutional crisis has arisen. ಇವತ್ತು ಸಂವಿಧಾನಾತ್ಮಕ ಬಿಕ್ಕಟ್ಟು ನಿರ್ಮಾಣವಾಗಿದೆ. ನಿನ್ನೆ ಯಡಿಯೂರಪ್ಪನವರ ಹಾವೇರಿಯ ಸಂಸ್ಥಾಪನಾ ಸಮಾವೇಶದಲ್ಲಿ ೧೪ ಜನ ಎಂ.ಎಲ್.ಎ.ಗಳು ಹೋಗಿದ್ದರು.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಕಾವೇರಿ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿದೆ, ...

ಅಧ್ಯಕ್ಷರು :- ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ :- ಕಾವೇರಿ ವಿಷಯದ ಬಗ್ಗೆಯೇ ಹೇಳುತ್ತಿರುವುದು. ನೀರು ಬಿಡುವುದಕ್ಕೆ ಇವರಿಗೆ ಅಧಿಕಾರವಿಲ್ಲ ಎಂದು ಹೇಳುತ್ತಿದ್ದೇನೆ. ಬಹುಮತವಿಲ್ಲದ ಸರ್ಕಾರದವರು ನೀರನ್ನು ಹೇಗೆ ಬಿಡುತ್ತಾರೆ ಎಂದು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಕಾವೇರಿ ವಿಷಯ ಮಾತನಾಡಿ. ಆಮೇಲೆ ಬೇರೆ ವಿಷಯ ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಇವರಿಗೆ ನೀರು ಬಿಡುವುದಕ್ಕೇ ಅಧಿಕಾರವಿಲ್ಲ, There is no Government. There is no Government at all.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಕಾವೇರಿ ವಿಷಯದ ಬಗ್ಗೆ ಮಾತನಾಡಲು ನಮಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಸಂವಿಧಾನದ ಬಿಕ್ಕಟ್ಟು ನಿರ್ಮಾಣವಾಗಿದೆ. ೧೪ ಜನ ಎಂ.ಎಲ್.ಎ.ಗಳು ಅಲ್ಲಿಗೆ ಹಾಜರಾಗಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಕಾವೇರಿ ವಿಷಯಕ್ಕೆ ಬನ್ನಿ, ಮಾತನಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- ಇವರಿಗೆ ಬಹುಮತವಿಲ್ಲ. ಬಹುಮತವಿಲ್ಲದೇ ಯಾವುದೇ ತೀರ್ಮಾನ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? It is going to be unconstitutional, illegal.ಅದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ನೀರು ಬಿಟ್ಟಿರುವುದೇ illegal. ನೀರು ಬಿಡುವುದಕ್ಕೆ ಇವರಿಗೆ ಯಾವ ಅಧಿಕಾರವಿದೆ? ಇವರದು ಅಲ್ಪಮತದ ಸರ್ಕಾರ. ನೀರು ಬಿಡುವುದಕ್ಕೆ ಇವರಿಗೆ ಯಾವ ಅಧಿಕಾರವಿದೆ? ಯಾವ transaction ಮಾಡಲು ಇವರಿಗೆ ಅಧಿಕಾರವಿದೆ? ಯಾವ Bill ತರುವುದಕ್ಕೆ ಇವರಿಗೆ ಅಧಿಕಾರವಿದೆ? ಮಾನ್ಯ ಅಧ್ಯಕ್ಷರೆ, ಇವರು ರಾಜೀನಾಮೆ ಕೊಡಬೇಕು. ಒಂದು ಕಡೆ ನೀರು ಬಿಟ್ಟು ರಾಜ್ಯಕ್ಕೆ ದ್ರೋಹ ಮಾಡಿದ್ದಾರೆ, ಇನ್ನೊಂದು ಕಡೆ ಅಲ್ಪಮತದ ಸರ್ಕಾರ. ನೀವು ಯಾವುದೇ business transact ಮಾಡಲು ಆಗುವುದಿಲ್ಲ, House ಕೂಡ ನಡೆಸಲು ಇವರಿಗೆ ಸಂವಿಧಾನಬದ್ಧವಾದ ಅಧಿಕಾರವಿಲ್ಲ, ಇವರಿಗೆ ನೈತಿಕ ಹಕ್ಕಿಲ್ಲ. ಇವರು ಎಲ್ಲವನ್ನೂ ಕೂಡ ಕಳೆದುಕೊಂಡಿದ್ದಾರೆ. ರಾಜೀನಾಮೆ ಕೊಟ್ಟು ಮನೆಗೆ ಹೋಗುವುದೊಂದೇ ದಾರಿ ಇವರಿಗೆ ಉಳಿದಿರುವುದು. ಇದನ್ನು ನೀವು ನಮ್ಮಿಂದ ಹೇಳಿಸಿಕೊಳ್ಳಬೇಕೇ? ಆದ್ದರಿಂದ ನಾನು ಹೇಳುತ್ತೇನೆ, ನಾವು ಧರಣಿಯಲ್ಲಿದ್ದೇವೆ, ಮುಖ್ಯಮಂತ್ರಿಗಳು ಈಗ ಇಲ್ಲಿದ್ದಾರೆ, ನಾನು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ, ನೀರು ನಿಲ್ಲಿಸಿದ್ದೇವೆ ಎನ್ನುವುದನ್ನು ನೀವು ಹೇಳಬೇಕು, ಇನ್ನು ಮುಂದೆ ಒಂದು ಹನಿ ನೀರನ್ನೂ ಬಿಡುವುದಿಲ್ಲವೆಂದು ಹೇಳಬೇಕು. ಜೊತೆಗೆ, ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು. ಮತ್ತೆ ಚುನಾವಣೆ ಎದುರಿಸುವುದಕ್ಕೆ ಹೋಗೋಣ ಮಾನ್ಯ ಮುಖ್ಯಮಂತ್ರಿಗಳೇ, ದಯಮಾಡಿ ರಾಜೀನಾಮೆ ಕೊಡಿ. ನಗು-ತ್ತಿದ್ದೀರಲ್ಲ,

ಯಾವ ರೀತಿ ಇದು? ಇದಕ್ಕೆ ಭಂಡ ಸರ್ಕಾರ ಎನ್ನಬೇಕಾಗುತ್ತದೆ. There is a constitutional crisis.

(ಈ ಹಂತದಲ್ಲಿ ವಿರೋಧ ಪಕ್ಷದ ಉಪ ನಾಯಕರಾದ ಶ್ರೀ ಬಿ.ಬಿ.ಜಯಚಂದ್ರರವರು ಮಾತನಾಡಲು ಎದ್ದುನಿಂತರು)

ಶ್ರೀ ಹೆಚ್.ಸಿ. ಬಾಲಕೃಷ್ಣ :-ಜಯಚಂದ್ರ ಸಾಪೇಬರೆ, ನಾವು ಒಂದು ನಿಮಿಷ ಮಾತನಾಡುತ್ತೇವೆ ಇರಿ. ನಿಮ್ಮ ನಾಯಕರು ಮಾತನಾಡಿದರಲ್ಲ? ನೀವು ಆಮೇಲೆ ಮಾತನಾಡಿ.

ಅಧ್ಯಕ್ಷರು :- ಬಾಲಕೃಷ್ಣರವರು ಈಗ ಮಾತನಾಡಲಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಒಂದು ದೊಂಬರಾಟ ನಡೆಯುತ್ತಿದೆ. ಇಲ್ಲಿ ರಾಜ್ಯ ಸರ್ಕಾರದವರು ತಮ್ಮ ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ನಾಟಕವಾಡುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:- ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ನಾನು ಮಾತನಾಡುತ್ತೇನೆ, ಆಮೇಲೆ ನೀವು ಮಾತನಾಡಿ.

(ಗೊಂದಲ)

ಅಧ್ಯಕ್ಷರು:- ನೀವು ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:-ಅಲ್ಲಿ ಕೇಂದ್ರ ಸರ್ಕಾರ ಸಿ.ಎಂ.ಸಿ.ಯನ್ನು ಉಪಯೋಗಿಸಿಕೊಂಡು ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ. ಸಿದ್ದರಾಮಯ್ಯನವರಿಗೆ ನಿಜವಾಗಿಯೂ ಬದ್ಧತೆ ಇದ್ದರೆ ಅವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ಸಿ.ಎಂ.ಸಿ. ಎಂದರೆ ಯಾರು? It is a mouth piece of Congress. C.M.C. is a mouth piece of Central Government.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:- ಈ ದೊಂಬರಾಟದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಸಿದ್ದರಾಮಯ್ಯನವರಿಗೆ ನಿಜವಾಗಿಯೂ ಬದ್ಧತೆ ಇದ್ದರೆ,

ಕಾಂಗ್ರೆಸ್‌ನವರಿಗೆ ನಿಜವಾಗಿಯೂ ಕಾವೇರಿಯ ಬಗ್ಗೆ ಬದ್ಧತೆ ಇದ್ದರೆ, ಸಿ.ಎಂ.ಸಿ. ತೀರ್ಮಾನವನ್ನು ವಾಪಸ್ಸು ತೆಗೆದುಕೊಳ್ಳಲು ಅವರಿಗೆ ಹೇಳಿ. ನಾವೆಲ್ಲರೂ ಕೂಡ ರಾಜೀನಾಮೆ ಕೊಡೋಣ. ಸುಪ್ರೀಂ ಕೋರ್ಟ್‌ನವರು ಬರೀ ೫೦,೦೦೦ ಕ್ಯೂಸೆಕ್ಸ್ ನೀರು ಬಿಡಿ ಎಂದು ಹೇಳಿದರೆ, ಕೇಂದ್ರ ಸರ್ಕಾರವನ್ನು ಉಳಿಸುವುದಕ್ಕೋಸ್ಕರ, ತಮಿಳುನಾಡಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ, ಸಿ.ಎಂ.ಸಿ.ಯವರಕೈಯಲ್ಲಿ ೧೨ ಟಿ.ಎಂ.ಸಿ. ನೀರು ಬಿಡಿ ಎಂದು ಹೇಳುತ್ತಿದ್ದಾರೆ. ಇದು ಯಾವ ನ್ಯಾಯ?

(ಗೊಂದಲ)

ಅಧ್ಯಕ್ಷರು:- ಈಗ ಸದನವನ್ನು ೧೦ ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ ೧೨.೦೭ಕ್ಕೆ ಮುಕ್ತಾಯಗೊಂಡು ಪುನ: ೧೦ ನಿಮಿಷಗಳ ನಂತರ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಪುನ: ೧೨ ಗಂಟೆ ೫೯ ನಿಮಿಷಕ್ಕೆ ಸಮಾವೇಶಗೊಂಡಾಗ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಬಂಡೆಪ್ಪ ಖಾಶೆಂಪೂರ್:- ಮಾನ್ಯ ಅಧ್ಯಕ್ಷರೆ, ಕಾವೇರಿ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ನಿಲುವು ಏನು ಎನ್ನುವುದರ ಬಗ್ಗೆ ಹೇಳಿಕೆಯನ್ನು ಮಾಡಬೇಕು.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯ ಮಂತ್ರಿಯವರು) :- ಮಾನ್ಯ ಅಧ್ಯಕ್ಷರೆ, ಎಲ್ಲರೂ ಸದನದ ಬಾವಿಯಿಂದ ಅವರ ಸ್ಥಳಗಳಿಗೆ ಹೋಗಲಿ, ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ. ಪರವಾಗಿಲ್ಲ ಸ್ಟೇಟ್‌ಮೆಂಟ್ ಮಾಡಿ ಎಂದರೆ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು):-ಮಾನ್ಯ ಅಧ್ಯಕ್ಷರೆ, ಸರ್ಕಾರ ನೀರು ನಿಲ್ಲಿಸಿದ್ದೇವೆ ಅಥವಾ ನಿಲ್ಲಿಸಿಲ್ಲ ಎಂದು ಯಾವುದನ್ನೂ ಹೇಳದೇ, ನಾವು ಮೊನ್ನೆಯಿಂದಲೂ ಒತ್ತಾಯ, ಧರಣಿ ಮಾಡುತ್ತಿದ್ದೇವೆ. ಕೂಡಲೇ ನೀರು ಬಿಡುವುದನ್ನು ನಿಲ್ಲಿಸಬೇಕು. ನಮ್ಮ ಭಾಗದಲ್ಲಿ ಬಹಳ ಕಷ್ಟ ಇದೆ. ಕಾವೇರಿ ಬೇಸಿನ್‌ನಲ್ಲಿ ಯಾವುದೇ ಜಲಾಶಯದಲ್ಲಿ ನೀರಿಲ್ಲ. ನಮ್ಮ ಬೆಳೆ-ಗಳು ಈಗಾಗಲೇ ಒಣಗುವುದಕ್ಕೆ ಶುರುವಾಗಿವೆ. ಕುಡಿಯುವುದಕ್ಕೆ ನೀರಿಲ್ಲ ಎಂದು

ಹೇಳಿದ್ದೇವೆ.ನೀರು ಬಿಡುವುದರಿಂದ ನಮ್ಮ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಆ ಭಾಗದ ರೈತರು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಪರಿಹಾರ ಕೊಡುವಂತಹ ಪರಿಸ್ಥಿತಿ ಈಗಾಗಲೇ ನಿರ್ಮಾಣವಾಗಿದೆ. ಒಂದು ಎಕರೆಗೆ ಸುಮಾರು ೨೫ ಸಾವಿರ ರೂಪಾಯಿ ಕೊಡಬೇಕಾದಂತಹ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಸರ್ಕಾರದ ನಿಲುವು ಏನು ಎನ್ನುವುದನ್ನು ಈಗ ಸ್ಪಷ್ಟಪಡಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು):-ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರಾದ ಬಾಲಕೃಷ್ಣರವರು, ಬಂಡೆಪ್ಪ ಖಾಶೆಂಪೂರ್‌ರವರು, ಕಾವೇರಿ ನದಿ ವಿಚಾರವಾಗಿ ಕೋರ್ಟ್‌ನಲ್ಲಿ ನಡೆದಂತಹ ವಿಚಾರದ ಬಗ್ಗೆ ಇವತ್ತು ಬೆಳಗ್ಗೆ ಏನು ವಿಷಯ ಪ್ರಸ್ತಾಪ ಮಾಡಿದರು, ನಾನು ಅವರಲ್ಲಿ ಒಂದು ಮನವಿ ಮಾಡುವುದೇನೆಂದರೆ, ಇದರ ಬಗ್ಗೆ ಏನೇನು ನಡೆದಿದೆ, ಸರ್ಕಾರದ ನಿಲುವು ಏನು ಎನ್ನುವುದನ್ನು ಪ್ರಸ್ತಾಪ ಮಾಡುತ್ತೇನೆ. ದಯವಿಟ್ಟು ಶಾಸಕರು ತಮ್ಮ ತಮ್ಮ ಸ್ಥಳಕ್ಕೆ ಹೋಗಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:-ತಾವು statement ಕೊಡಿ.

3. ಕಾವೇರಿ ವಿಚಾರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಿಂದ ಹೇಳಿಕೆ

ಶ್ರೀ ಜಗದೀಶ್ ಶೆಟ್ಟರ್(ಮುಖ್ಯ ಮಂತ್ರಿಯವರು):-ತಾವು ಹಾಗೆಯೇ ಇದ್ದು statement ಕೊಡಬೇಕೆಂದರೆ ಕೊಡುತ್ತೇನೆ. ಮಾನ್ಯ ಅಧ್ಯಕ್ಷರೆ, ಕಳೆದ ೨-೩ ದಿವಸಗಳಲ್ಲಿ ಈ ಅಧಿವೇಶನ ಪ್ರಾರಂಭವಾದ ಮೇಲೆ, ಕಾವೇರಿ ನದಿ ನೀರನ್ನು ತಮಿಳುನಾಡಿನ ಜಲಾಶಯಗಳಿಗೆ ಬಿಡಬೇಕೆಂದು ಮಾನ್ಯ ಸುಪ್ರೀಂಕೋರ್ಟ್‌ನ ಆದೇಶವಾದ ಮೇಲೆ, ಅವತ್ತಿನ ದಿವಸವೂ ಕೂಡ ನಮ್ಮ ವಿರೋಧ ಪಕ್ಷದ ನಾಯಕರು, Floor Leadersಎಲ್ಲರನ್ನು ಕರೆದು ಅವರ ಜೊತೆ ಸಮಾಲೋಚನೆ ಮಾಡಿ, ಹಲವಾರು ವಿಚಾರಗಳನ್ನು ವಿಧಾನ ಸಬೆ ಹಾಗೂ ವಿಧಾನ ಪರಿಷತ್ತಿನಲ್ಲಿಯೂ ಸಹಿತ ಅದರ ಬಗ್ಗೆ ವಿವರಣೆ ಕೊಟ್ಟೆ ಮತ್ತು